ಅಧ್ಯಕ್ಷರು :- ಚೌಡರೆಡ್ಡಿಯವರು ಬಂದಿಲ್ಲ. ಆರಗ ಜ್ಞಾನೇಂದ್ರರವರು ಪ್ರಶ್ನೆ ಕೇಳಿ.

ಸಹಕಾರ ವ್ಯವಸಾಯ ಸಂಘಗಳಲ್ಲಿನ ಉದ್ಯೋಗಿಗಳ ವೇತನವನ್ನು ಹೆಚ್ಚಿಸುವ ಬಗ್ಗೆ

213 (2333) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಸ್ಥಿತಿಯಲ್ಲಿರುವ ಸಹಕಾರ ವ್ಯವಸಾಯ ಸಂಘಗಳಲ್ಲಿ ಮತ್ತು ಇತರೆ ಸಹಕಾರ ಸಂಘಗಳಲ್ಲಿ ಉದ್ಯೋಗಿಗಳು ಅತ್ಯಂತ ಕಡಿಮೆ ವೇತನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಲಾಭಗಳಿಸಿ, ಸುಸ್ಥಿತಿಯಲ್ಲಿರುವ ಸಂಘಗಳ ಆಡಳಿತ ಮಂಡಳಿಗಳು ವೇತನ ಹೆಚ್ಚಳಕ್ಕೆ ನಿರ್ಣಯ ಮಾಡಿ ಸರ್ಕಾರಕ್ಕೆ ಕಳಿಸಿಕೊಟ್ಟ ಪ್ರಸ್ತಾವನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಸಹಕಾರ ಸಂಘಗಳ ನಿಯಮ ಹದಿನೇಳನ್ನು ತಿದ್ದುಪಡಿ ಮಾಡಿ ಅಧಿಕಾರವನ್ನು ಉಪ ನಿಬಂಧಕರಿಗೆ ಕೊಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ; ಈ ಬಗ್ಗೆ ವಿವರ ನೀಡುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಸಹಕಾರ ಸಂಘಗಳ ನೌಕರರು ಪಡೆಯುವ ವೇತನಶ್ರೇಣಿ ಹಾಗೂ ಭತ್ಯೆಗಳು ಅವುಗಳ ಆರ್ಥಿಕ ಪರಿಸ್ಥಿತಿ ಹಾಗೂ ಲಾಭದಾಯಕತೆಯನ್ನು ಅವಲಂಬಿಸಿರುತ್ತದೆ.

ಆ) ಸರ್ಕಾರಕ್ಕೆ ಕಳಿಸಿಕೊಟ್ಟ ಪ್ರಸ್ತಾವನೆಗಳು ಕೂಲಂಕುಷವಾಗಿ ಪರಿಶೀಲಿಸಿ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿ ಲಾಭದಾಯಕತೆ ಮತ್ತು ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಅನುಮೋದನೆ ನೀಡುತ್ತಿದೆ.

ಇ) ಸಹಕಾರ ಸಂಘಗಳ ನಿಬಂಧಕರು 17(1)ನ್ನು ತಿದ್ದುಪಡಿ ಮಾಡಲು ಸಂಬಂಧಪಟ್ಟವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲು ದಿನಾಂಕ: 18-01-2003 ರಂದು ಕರಡು ಅಧಿಸೂಚನೆಯನ್ನು ದಿ: 30.01.2003 ರ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ವಿವಿಧ ಸಹಕಾರ ಸಂಘಗಳಿಂದ ಬಂದಿರುವ ಆಕ್ಷೇಪಣೆಗಳನ್ನು ಪರಿಗಣಿಸಿ ಅಂತಿಮ ಅಧಿಸೂಚನೆಯ ಕರಡನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗೆ ಪರಿಶೀಲನೆಗಾಗಿ ಕಳುಹಿಸಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ :- ಅನೇಕ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗದ ಒಂದು ವದಂತಿಯನ್ನು ನಾವು ಕೇಳುತ್ತಿರುತ್ತೇವೆ. ಆದರೆ, ಅನೇಕ ಸಹಕಾರ ಸಂಘಗಳು ಒಳ್ಳೆಯ ಕೆಲಸ ಮಾಡಿ, ಲಾಭ ಗಳಿಸುತ್ತಿವೆ. ಆದರೆ, ಅಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳು ಮಾತ್ರ ಅವರ ಕೈತುಂಬಾ ಸಂಬಳ ಪಡೆಯಲು ವಂಚಿತರಾಗಿದ್ದಾರೆ. ಅಂಥ ಅನೇಕ ಸಂಘ-ಸಂಸ್ಥೆಗಳು ಲಾಭಗಳಿಸಿವೆ, ಒಳ್ಳೆಯ ಕೆಲಸ ಮಾಡುತ್ತಿವೆ. ಪ್ರಾಮಾಣಿಕವಾದ ಸಿಬ್ಬಂದಿಗಳಿಗೆ ಸಂಬಳ ಜಾಸ್ತಿ ಮಾಡೋಣವೆಂದು ಹೇಳಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿದರೆ, ಸರ್ಕಾರ ಇದುವರೆಗೆ ಮಂಜೂರಾತಿ ಕೊಡುತ್ತಿಲ್ಲ. ಇದರಿಂದಾಗಿ ಸಹಕಾರ ಸಂಘಗಳಲ್ಲಿ ಅವರ ಜೀವನೋಪಾಯಕ್ಕೋಸ್ಕರ ಕದಿಯುವ ಕೆಲಸಕ್ಕೆ ಕೈ ಹಾಕಬೇಕಾಗುತ್ತದೆ. ಸರ್ಕಾರ ಅಪ್ರತ್ಯಕ್ಷವಾಗಿ ಅಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುತ್ತದೆ. ಆದುದರಿಂದ ಏನು ಮಂಡಳಿಯವರು ಶಿಫಾರಸ್ಸು ಮಾಡಿ ಕಳುಹಿಸುತ್ತಾರೆ, ಅಂಥ ಒಂದು ಸಂಬಳ ಸಾರಿಗೆ ಕೊಡಲು ಇವರಿಗೇನು

ತೊಂದರೆಯಾಗಿದೆ? ಈ ರೀತಿ ಬಂದಿರುವ ಎಷ್ಟು ಅರ್ಜಿಗಳು ತಮ್ಮಲ್ಲಿ ಪೆಂಡಿಂಗ್ ಇವೆ ಎಂದು ಕೇಳಿದ್ದೆ. ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಮಾನ್ಯ ಮಂತ್ರಿಗಳು ಕೊಟ್ಟಿಲ್ಲ. ಈ ಬಗ್ಗೆ ವಿಷದವಾಗಿ ಹೇಳಬೇಕಾಗುತ್ತದೆಂದು ವಿನಂತಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ :- ವೃಂದ ಮತ್ತು ಶ್ರೇಣಿಗೆ ಸಿಬ್ಬಂದಿ ಬಲ ಕೊಡುವುದರಲ್ಲಿ ಸುಮಾರು ಈ ತನಕವೂ 213 ಪ್ರಕರಣಗಳು ಸರ್ಕಾರದ ಮುಂದೆ ಬಂದು ಸ್ವೀಕೃತವಾಗಿವೆ. ಅದರಲ್ಲಿ 201 ಪ್ರಕರಣಗಳಿಗೆ ಅನುಮೋದನೆ ಕೊಟ್ಟಿದ್ದೇವೆ. ರೂಲ್ 17(1), ಅದು ಹಿಂದೆ ತಿದ್ದುಪಡಿಯಾಗಿ 1997ನೇ ಇಸವಿಯಲ್ಲಿ ಅಧೀನಾಧಿಕಾರಿಗಳಿಗೆ ಇದ್ದುದ್ದನ್ನು ಸರ್ಕಾರಕ್ಕೆ ತೆಗೆದುಕೊಂಡಿತು. ಈಗ ಮನೆಯಲ್ಲೂ ಕೂಡ ಭರವಸೆ ಕೊಟ್ಟಂತೆ ಈಗಾಗಲೇ ಅದನ್ನು ಮತ್ತೆ ಅಧೀನಾಧಿಕಾರಿಗಳಿಗೆ ವಾಪಸ್ಸು ಕಳುಹಿಸುವ ವಿಧಿಯನ್ನು ಈಗ ಅದು ಕಾನೂನು ಇಲಾಖೆಯಲ್ಲಿ ಶಾಸನ ಬದ್ಧವಾಗಿ ಹೊರಬರಲಿಕ್ಕೆ ಇದೆ. ಇನ್ನೊಂದು ವಾರದಲ್ಲಿ ಅದು ಶಾಸನ ಬದ್ಧವಾಗಿ ಇಲ್ಲಿ ಬಂದು ನಾವು ಅದನ್ನು ನಮ್ಮ ಅಧೀನಾಧಿಕಾರಿಗಳಿಗೆ ಮಹಿಸಿಕೊಡುತ್ತೇವೆ. ಈ ಪ್ರಕರಣಗಳಿಗೋಸ್ಕರ ಯಾರೂ ವಿಧಾನ ಸೌಧಕ್ಕೆ ಎಡತಾಕುವಂಥ ಅವಕಾಶವಿರುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ :- 17(1)ನೇ ನಿಬಂಧನೆಯನ್ನು ಜಾರಿಗೆ ಕೊಡುವವರೆಗಾದರೂ ಕಳೆದ 3-4 ವರ್ಷಗಳಿಂದ ನಿಮ್ಮ ಕಡೆ ಏನು ಶಿಫಾರಸ್ಸು ಮಾಡಿ, ಸಂಬಳ ಜಾಸ್ತಿ ಮಾಡಲಿಕ್ಕೋಸ್ಕರ ಬಂದಿರುವ ಸಂಸ್ಥೆಗಳ ಉದಾಹರಣೆ ನಾನೇ ಹೇಳುತ್ತೇನೆ ನನ್ನ ಟಿಎಪಿಸಿಎಂಎಸ್ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಅನೇಕ ಪ್ರಾಥಮಿಕ ಸಹಕಾರ ಸಂಘಗಳಲ್ಲಿರುವ ಕಾರ್ಯದರ್ಶಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಸಂಬಳ ಜಾಸ್ತಿ ಮಾಡಲಿಲ್ಲ. ಇಲ್ಲಿ ಲಾಭ ಜಾಸ್ತಿ ಗಳಿಸಿದ್ದಾರೆ, ಸುಸ್ಥಿತಿಯಲ್ಲಿ ಸಂಘಗಳನ್ನು ಇಟ್ಟಿದ್ದಾರೆ. ಅಂಥ ಸಂಘಗಳ ಬಗ್ಗೆ ಅವರು 500, 600 ರೂಪಾಯಿಗಳಿಗೆ 8,9 ಗಂಟೆ ಕೆಲಸ ಮಾಡುತ್ತಿದ್ದಾರೆ. ಅಂಥ ಸಹಕಾರ ಸಂಘದ ಸಿಬ್ಬಂದಿಗಳಿಗೆ ಕೊಡಲು ನಾವೇನು ಶಿಫಾರಸ್ಸು ಮಾಡಿ ಕಳುಹಿಸಿದರೆ, ಇವರು 17 (1) ತಿದ್ದುಪಡಿಯಾಗುತ್ತದೆ ಎಂದು ಸುಮ್ಮನೆ ಕುಳಿತಿರುತ್ತೀರಿ. ಇನ್ನೂ ಒಂದು ವರ್ಷ ಬೇಕು. ನೀವೇನು ಹೇಳುತ್ತೀರಿ, 210 ಪ್ರಕರಣಗಳನ್ನು ಮುಗಿಸಿ ವಾಪಸ್ಸು ಕಳುಹಿಸುತ್ತೇವೆಂದು ಹೇಳುತ್ತೀರಿ. ಅದು ಯಾವ ಆಧಾರದ ಮೇಲೆ ಮುಗಿಸಿದೆ ಎಂಬುದು ಗೊತ್ತಿಲ್ಲ. ತೀರ್ಥಹಳ್ಳಿ ತಾಲ್ಲೂಕಿಗೆ ಮಲತಾಯಿ ಧೋರಣೆ ಏಕೆಂದು ಹೇಳಬೇಕು. ತಾವು ಸಹಕಾರ ಸಚಿವರಾದ ಮೇಲೆ ಅನೇಕ ಸಾರಿ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಇದುವರೆಗೆ ಮಾಡಿ ಕೊಟ್ಟಿಲ್ಲ. ಮಾಡಿಕೊಡುವುದಕ್ಕೆ ಯಾವ್ಯಾವ ಅಧಿಕಾರಿಗಳಿಗೆ ಏನೇನು ಕೊಡಬೇಕೆಂದು ಹೇಳಬೇಕು. ಅದನ್ನು ಸಲ್ಲಿಸಿ ನಾವು ತೆಗೆದುಕೊಂಡು ಹೋಗುತ್ತೇವೆ. ಇಲ್ಲದಿದ್ದರೆ, ಏಕೆ ತೀರ್ಥಹಳ್ಳಿ ತಾಲ್ಲೂಕಿನ ಸಹಕಾರ ಸಂಘಗಳ ಸಿಬ್ಬಂದಿಯನ್ನು ಹಾಗೇ ಇಟ್ಟು, 210 ಅನ್ನು ವಾಪಸ್ಸು ಕಳುಹಿಸಿದಿರಿ ಎಂಬುದಕ್ಕೆ ಉತ್ತರ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತೀರ್ಥಹಳ್ಳಿಗೆ ಮಲತಾಯಿ ಧೋರಣೆ ತೋರಿಸಿದರೆ ನಾವೆಲ್ಲಿ ಹೋಗಬೇಕು? ಅದು ಅವರಿಗೂ ಗೊತ್ತು.

ಶ್ರೀ ಅರಗ ಜ್ಞಾನೇಂದ್ರ :- ಇದು ಉದಾಹರಣೆ. ನಾವು ಹಾಗೇ ತಿಳಿದುಕೊಂಡಿದ್ದೇವೆ. ಅದು ನಿಮ್ಮ ಸರ್ಕಾರದ ಮಟ್ಟಿಗೆ ಆಗಬಾರದೆಂದು.

ಶ್ರೀ ಹೆಚ್. ವಿಶ್ವನಾಥ್ :- ಯಾವ ಸಂಸ್ಥೆಗಳು ಆರ್ಥಿಕವಾಗಿ ಪ್ರಬಲವಾಗಿರುತ್ತವೆ, ಅಂಥವು ವೃಂದ ಬಲ ಶ್ರೇಣಿ ಕೊಡಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಆದರೆ, ತಾವು

ಟಿಎಪಿಸಿಎಂಎಸ್ ಬಗ್ಗೆ ಹೇಳುತ್ತಿದ್ದೀರಿ, ನನ್ನ ಕಡೆ ಯಾವ ಫೈಲ್ಸ್ ಕೂಡ ಒಂದು ವಾರದ ಮೇಲೆ ಉಳಿಯುವುದಿಲ್ಲ. ಆ ತರಹವೇನಾದರೂ ಇದ್ದರೆ, ನಾನು, by 5 o' clock, I will get bact to you. ಏನಾದರೂ ಫೈಲ್ ನನ್ನ ಹತ್ತಿರ ಪೆಂಡಿಂಗ್ ಇದ್ದರೆ, Under Section 17 (1) (c) any file pending before me, please spell out. I will clear it of within 5 o' clock.

ಶ್ರೀ ಆರಗ ಜ್ಞಾನೇಂದ್ರ :- ತೀರ್ಥಹಳ್ಳಿ ತಾಲ್ಲೂಕಿನ ಟಿಎಪಿಸಿಎಂಎಸ್ ಮತ್ತು ತೀರ್ಥಹಳ್ಳಿ ಪ್ರಾಥಮಿಕ ಸಹಕಾರ ಸಂಘದ ಫೈಲ್ ತಮ್ಮ ಕಡೆ ಮೊನ್ನೆ ತಾನೇ ಬಂದಿದೆ. ಮತ್ತು ಒಬ್ಬ ಕಾರ್ಯದರ್ಶಿಗಳಿಗೆ ಹೋಗಿ ಕೆಳಗಡೆ ಹೋಗಿದೆ.

ಶ್ರೀ ಹೆಚ್. ವಿಶ್ವನಾಥ್ :- ಆರ್ಥಿಕವಾಗಿ ಬಲ ಇಲ್ಲದಿದ್ದರೆ ವಾಪಸ್ಸು ಹೋಗುತ್ತದೆ. ಎನ್‌ಪಿಎ ಇಲ್ಲದಿದ್ದರೆ ವಾಪಸ್ಸು ಹೋಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ :- ಸಂಪೂರ್ಣವಾಗಿ ಲಾಭ ಗಳಿಸುತ್ತಿದೆ. ಸಾವಿರಾರು ರೂಪಾಯಿ ಲಾಭ ಗಳಿಸುತ್ತಿದೆ. ಕೊಡಲು ತಮಗೆ ತೊಂದರೆ ಇಲ್ಲವೆಂದು ಕಾರ್ಯಕಾರಿ ಮಂಡಳಿ ಸಮಿತಿಯವರು ಮಾಡಿ ಕಳುಹಿಸಿದ್ದಾರೆ. ಮಾನ್ಯ ಖರ್ಗೆಯವರು ಹೇಳಿದ ಹಾಗೆ, ನಮ್ಮ ತಾಲ್ಲೂಕಿನ ಬಗ್ಗೆ ಮಲತಾಯಿ ಧೋರಣೆ ತೋರಿಸಿಲ್ಲವೆಂದು ಹೇಳುತ್ತೀರಿ. ಸಂತೆಯಲ್ಲಿ ಉಂಟೆ ಸೋದರಮಾವ. ಸಂತೆಯಲ್ಲಿ ತೀರ್ಥಹಳ್ಳಿಯಲ್ಲೂ ಒಂದೇ, ಎಲ್ಲಾ ಹಳ್ಳಿಯೂ ಒಂದೇ. ವಿಶೇಷ ಗಮನ ಕೊಡುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಸನ್ಮಾನ್ಯ ಅಧ್ಯಕ್ಷರೇ, 5 o' clock, ಕ್ಲಿಯರ್ ಮಾಡುತ್ತೇವೆಂದು ಹೇಳಿದಿರಿ.

ಶ್ರೀ ಹೆಚ್. ವಿಶ್ವನಾಥ್ :- ಸರ್ಕಾರದ ಮುಂದೆ ಅಂಡರ್ ರೂಲ್ 17 (1) ಯಾವುದಾದರೂ ಪೆಂಡಿಂಗ್ ಇದ್ದರೆ, ನೀವು ಈ ರೀತಿ ಇದೆ ಎಂದು ಸ್ಪೆಲ್-ಔಟ್ ಮಾಡಿದರೆ if it is financially, economically, viable. 5 ಗಂಟೆಯೊಳಗೆ ನಿಮಗೆ ಆದೇಶ ಕೊಡುತ್ತೇನೆ. ಆದರೆ, ಕಾಯಕಾರಿ ಮಂಡಳಿಯವರೇ ಕುಳಿತು 15 ಪರ್ಸೆಂಟ್ ಎನ್‌ಪಿಎ ಇದ್ದರೂ, ಇವರಿಗೆ ಸಂಬಳ ಜಾಸ್ತಿ ಮಾಡಬೇಕೆಂದರೆ ಅದು ಆಗಲು ಸಾಧ್ಯವಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಎನ್‌ಪಿಎ ಇರುವುದನ್ನು ನಾನು ಹೇಳುವುದಿಲ್ಲ. ನೀವು ಈ ಇಲಾಖೆಗೆ ಈಗ ಬಂದಿದ್ದೀರಿ. It is a policy matter. ಬಿಜಾಪುರ ಡಿಸಿಸಿ ಬ್ಯಾಂಕ್....

ಅಧ್ಯಕ್ಷರು :- ಹೆಗಡೆ ಮತ್ತು ಪಾಟೀಲರು. ವಿಜಾಪುರ ಬ್ಯಾಂಕ್ ವಿಷಯ ಇಲ್ಲಿ ನಾವು ಮಾತನಾಡುತ್ತಿಲ್ಲ. ಒಬ್ಬೊಬ್ಬರೂ ಅವರ ಬ್ಯಾಂಕಿನ ಬಗ್ಗೆ ಕೇಳುತ್ತಾರೆ.

(ಗೊಂದಲ)

SRI H. VISHWANATH:- You are saying with regard to the recruitment. ಇದು ರಿಕ್ರೂಟ್‌ಮೆಂಟ್ ಅಲ್ಲ. Scale of finance. It is not recruitment.

ಶ್ರೀ ಶಿವಾನಂದ ಎಸ್. ಪಾಟೀಲ್ :- ಅಧ್ಯಕ್ಷರೇ, Scale of finance or recruitment, What does it makes a difference?

ಶ್ರೀ ಎಸ್.ಎಸ್. ಪಾಟೀಲ್ :- ಅಧಿಕಾರವನ್ನು ನಾನಿದ್ದಾಗ ಸರ್ಕಾರಕ್ಕೆ ತೆಗೆದುಕೊಂಡಿರುವುದು. ಯಾವ ಕಾರಣದಿಂದ ತೆಗೆದುಕೊಂಡಿದೆ ಎಂಬುದು ತಮಗೆ ಗೊತ್ತಾಗಿದೆ. ತಾವು ಏನೂ ಅಮೆಂಡ್‌ಮೆಂಟ್ ಮಾಡಬೇಕಾಗಿಲ್ಲ. ಪವರ್ಸ್ ಡಿಲಿಗೇಟ್ ಮಾಡಿದರೆ ಸಾಕು. ಒರಿಜಿನಲಿ ಡಿಲಿಗೇಷನ್ ಆಫ್ ಪವರ್ಸ್ ಸರ್ಕಾರಕ್ಕಿರಬೇಕು. ಆ ದೃಷ್ಟಿಯಿಂದಲೇ ಮಾಡಿದೆ. ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್‌ನಿಂದ ಮಾಡಿದ್ದನ್ನು ಮಂತ್ರಿ ಕೇಳಿದರೆ, ಕೋರ್ಟ್ ನಿನಗೆ ಅಧಿಕಾರ ಇದೆಯೇ ಎಂದು ಕೇಳುತ್ತದೆ. ಆ ಕಾರಣದಿಂದ ಇದನ್ನು ಮಾಡಿದೆ. ಪವರ್ಸ್ ಡಿಲಿಗೇಟ್ ಮಾಡಿ. ಅದಕ್ಕೆ ಅಮೆಂಡ್‌ಮೆಂಟ್ ಬೇಕಾಗುವುದಿಲ್ಲ. ಡಿಸಾಲ್ವ್ ಆಯಿತು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ರೂಲ್ಸ್ ಅಮೆಂಡ್‌ಮೆಂಟ್ ಎಲ್ಲಾ ರೆಡಿ ಇತ್ತು. ನಮ್ಮ ಕಾಯ್ದೆ ಇಲಾಖೆಗೆ ಹೋಗಿತ್ತು. ರೋಸ್ಟರ್ ಕಂ ಮೆರಿಟ್ ಮೇಲೆ ಅವರೇ ತುಂಬಿಕೊಳ್ಳಬೇಕು. ಅಸಿಸ್ಟೆಂಟ್ ಡೈರೆಕ್ಟರ್ ಬೇಡ, ರಿಜಿಸ್ಟ್ರಾರ್ ಬೇಡ, ಡೆಪ್ಯೂಟಿ ರಿಜಿಸ್ಟ್ರಾರ್ ಬೇಡ, ಭ್ರಷ್ಟಾಚಾರ ನಡೆಯುತ್ತದೆ. ಬಹಳ ಭ್ರಷ್ಟಾಚಾರ ನಡೆದು, ಅಲ್ಲಿ 500 ರೂ ಸಂಬಳ ಕೊಡಲು 2 ಸಾವಿರ ರೂ ಸಂಬಳದಲ್ಲಿ ಪರ್ಮಿಶನ್ ಕೊಟ್ಟಿದ್ದರು. ಸೊಸೈಟಿ ಮುಳುಗಿಹೋಗಿತ್ತು. ಆ ಕಾರಣದಿಂದ ಮಾಡಿದ್ದು ಇದೆ. ತಾವೇನು ಮಾಡಬೇಕೆಂದರೆ, ಎರಡೂವರೆ, ಅಥವಾ ಎರಡೋ ಅವರ ಬಂಡವಾಳದ ಮೇಲೆ ಪರ್ಸೆಂಟೇಜ್ ಹಾಕಿ ಅಮೆಂಡ್‌ಮೆಂಟ್ ಆಗಿದೆ. ಅದನ್ನು ತರಿಸಿ. ಅದನ್ನು ಮಾಡಿದರೆ ಕ್ರಾಂತಿಯಾಗುತ್ತೆದೆ.

3.40 ಪಿ.ಎಂ.

ರೋಸ್ಟರ್ ಕಂ ಮೆರಿಟ್ ಮೇಲೆ ಲಿಸ್ಟ್ ಹಚ್ಚಬೇಕು, ಇವತ್ತು ನಾವು ಏನು ಪರ್ಮಿಶನ್ ಕೊಟ್ಟರೂ ದೊಡ್ಡು ಹೊಡೆದು ತುಂಬುತ್ತಾರೆ. ತಮಗೆ ಗೊತ್ತಿರುವಂತೆ ಚಿತ್ರದುರ್ಗದ ಸಂಬಂಧವಾಗಿ ನನಗೆ ಎರಡು ಸೂಟ್‌ಕೇಸ್ ಕೊಟ್ಟು ಹೋದರು ಎಂದು ಪತ್ರಿಕೆಯಲ್ಲಿ ಬಂದಿತ್ತು. ಪರ್ಮಿಶನ್ ಕೊಟ್ಟ ಮೇಲೆ ದುಡ್ಡು ತಿಂದರು ಎನ್ನುವ ಪರಿಸ್ಥಿತಿ ಬರುತ್ತದೆ, ತಿಂದಿದ್ದು ನಿಜ, ಅಲೆಲ್ಲಾ ಹೊಡೆಯುತ್ತಾರೆ ಅದು ನಮಗೆ ಬರುತ್ತದೆ ಬರುವುದಿಲ್ಲವೆಂದಲ್ಲ, ಅದು ದೇವರು ನೋಡಿಕೊಳ್ಳುತ್ತಾನೆ. ಆ ಮಾತು ಬೇರೆ. ನಾನು ಅವರ ದುಡಿಯುವ ಬಂಡವಾಳದ ಮೇಲೆ 2 ರಿಂದ ಎರಡೂವರೆ ಪರ್ಸೆಂಟ್ ಇಟ್ಟು ರೋಸ್ಟರ್ ಕಂ ಮೆರಿಟ್ ಮೇಲೆ ಅವರೇ ತುಂಬಿಕೊಳ್ಳಲಿಕ್ಕೆ ಹೇಳಿದರೆ, ಯಾವ ಅಸಿಸ್ಟೆಂಟ್ ರಿಜಿಸ್ಟ್ರಾರ್ ಬೇಡ, ಡೆಪ್ಯೂಟಿ ರಿಜಿಸ್ಟ್ರಾರ್ ಬೇಡ, ಸರ್ಕಾರ ಬೇಡ, ಆ ಒಂದು ರೂಲ್ ಅನ್ನು ನಾವು ರೆಡಿ ಮಾಡಿ ಇಟ್ಟಿದ್ದೆವು. ಬಹುಶಃ ಅದನ್ನು ತರಿಸಿ ಮಾಡಿದರೆ ಇದೊಂದು ದೊಡ್ಡ ಕ್ರಾಂತಿಯಾಗುತ್ತದೆ. ನಾನು ಇದನ್ನು ಸಲಹೆ ಮಾಡುತ್ತೇನೆ.

ಶ್ರೀ ಹೆಚ್. ವಿಶ್ವಾನಾಥ್ :- ಪವರ್ ಡೆಲಿಗೇಟ್ ಮಾಡುತ್ತಿದ್ದೇವೆ, ತಾವೇನು 1997ನೇ ಇಸವಿಯಲ್ಲಿ ಪವರ್ ಅನ್ನು ಸರ್ಕಾರ ಇಟ್ಟುಕೊಂಡಿರಬೇಕೆಂದು ತಾವು ಏನು ಅಮೆಂಡ್‌ಮೆಂಟ್ ತಂದಿದ್ದಿರಲ್ಲಾ, ಮತ್ತೆ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿ....

ಶ್ರೀ ಎಸ್.ಎಸ್. ಪಾಟೀಲ್ :- ಪವರ್ ಡಿಲಿಗೇಷನ್ ಮಾಡಿಬಿಡಿ, ಒರಿಜಿನಲ್ ನಿಮ್ಮ ಹತ್ತಿರ ಇರಲಿ ಪವರ್ ಡೆಲಿಗೇಟ್ ಮಾಡಿ ಕೊಟ್ಟುಬಿಡಿ.

ಶ್ರೀ ಹೆಚ್. ವಿಶ್ವನಾಥ್ :- ಮಾಡುತ್ತಿದ್ದೇವೆ, ನಾವು ಬ್ಯಾಕ್‌ಲಾಗ್ ಕೂಡ ತುಂಬುತ್ತಿದ್ದೇವೆ. ತಮ್ಮ ಗಮನಕ್ಕೆ ತರುವುದಾದರೆ, ಒಂದೊಂದು ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ 30 ಜನ ತೆಗೆದುಕೊಂಡರೆ 30 ಜನರನ್ನು ಒಂದೇ ಜಾತಿಯವರನ್ನು ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ನಾವು ಕಡಿವಾಣ ಹಾಕಿದ್ದೇವೆ, ಜೊತೆಗೆ ರೋಸ್ಟರ್ ಅಂಡ್ ಮೆರಿಟ್ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್.ಎಸ್. ಪಾಟೀಲ್ :- ಆಗಲೂ ಕೂಡ ಬ್ಯಾಕ್‌ಲಾಗ್ ತುಂಬಿದ್ದೇವೆ, ರೋಸ್ಟರ್ ಇಲ್ಲದೇ ಯಾರಿಗೂ ಕೊಟ್ಟಿಲ್ಲ. ಫಾಲೋ ಮಾಡಿದ್ದಾರೆ, ನನ್ನ ಅವಧಿಯೊಳಗೆ ನೀವು ಒಂದೇ ಒಂದು ಉದಾಹರಣೆ ತೋರಿಸಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ :- ಈಗ ಮಾಡಿತ್ತಿದ್ದೇವೆ, ಹಿಂದೆ ಮಾಡಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ನಮಗಿಂತ ಹಿಂದೆ ಆಗಿರಬೇಕು, ರೋಸ್ಟರ್ ಫಾಲೋ ಮಾಡುವುದರ ಜೊತೆಗೆ ರೋಸ್ಟರ್ ಕಂ ಮೆರಿಟ್ ಮೇಲೆ ಲಿಸ್ಟ್ ಹಚ್ಚಿದರೆ ಈ ಭ್ರಷ್ಟಚಾರ ಹೋಗುತ್ತದೆ. ನಮಗೆ ತಿಳಿದವರನ್ನು ತೆಗೆದುಕೊಳ್ಳುವುದು ಬರೀ ಇದೇ ಆಗುತ್ತದೆ, ಇವರೇ ರೈಜ್ ಮಾಡಿದ್ದರಿಂದ ನಾನು ಕೌನ್ಸಿಲ್‌ನಲ್ಲಿ ಹೇಳಿಕೆ ಕೊಟ್ಟಿದ್ದೆ. ರೋಸ್ಟರ್ ಕಂ ಮೆರಿಟ್ ಮೇಲೆ ಲಿಸ್ಟ್ ಹಚ್ಚುತ್ತೇವೆಂದು ನೀವು ಆದೇಶ ಮಾಡಿಬಿಡಿ.

ಶ್ರೀ ಹೆಚ್. ವಿಶ್ವನಾಥ್ :- ಆಗಲಿ ತಾವು ಏನು ಹೇಳಿದಿರಿ ಅದು ಆಗುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಹಿಂದಿನ ಅಧಿವೇಶನದ ಸಂದರ್ಭದಲ್ಲೂ ಈ ಹದಿನೇಳು ಒಂದನ್ನು ತಿದ್ದುಪಡಿ ಬಗ್ಗೆ ಪ್ರಸ್ತಾಪವಾಗಿತ್ತು. ಏಕೆಂದರೆ, ಅಧಿಕಾರ ಕೇಂದ್ರೀಕೃತವಾಗುತ್ತಿರುವುದರಿಂದ ಸಾಮಾನ್ಯ ಸಹಕಾರ ಸಂಘಕ್ಕೂ - ಬೆಂಗಳೂರಿಗೆ ಅಲೆದಾಡತಕ್ಕಂಥ ಸಮಸ್ಯೆ ಸರ್ಕಾರದ ಗಮನಕ್ಕೂ ಬಂದಿದೆ ಹಾಗೂ ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿದೆ. ಹಿಂದೆ ಈ ಬಗ್ಗೆ ಪ್ರಸ್ತಾಪವಾದಾಗ ತಾವು ಶೀಘ್ರದಲ್ಲಿಯೇ ಇದಕ್ಕೆ ತಿದ್ದುಪಡಿ ತರುತ್ತೇವೆಂದು ಹೇಳಿದ್ದೀರಿ, ಈಗಂತೂ ನೀವು ಸಂಸದೀಯ ಮತ್ತು ವ್ಯವಹಾರ ಇಲಾಖೆಗೆ ಕಳುಹಿಸಿದ್ದೇರೆಂದು ಹೇಳಿದಿರಿ. ಇದರಿಂದ ಏನು ಆಗುತ್ತದೆ ಎಂದರೆ, ಈಗ ಅದು ಅಲ್ಲಿಗೆ ಹೋಗಿದೆ, ಇನ್ನು ಒಂದು ವಾರದಲ್ಲಿ ಇದನ್ನು ಮಾಡಿ ಬಿಡುತ್ತೇವೆಂದು ಹೇಳಿದಿರಿ, ಈ ಮಾತಿನ ವಿಶ್ವಾಸಕ್ಕೆ ನಾವು ಮೆಚ್ಚುತ್ತೇವೆ ಆದರೆ ಅವರ ವಿಶ್ವಾಸ ವಿಶ್ವಾಸವಾಗಿ ಉಳಿಯುತ್ತೆ ಎಂಬ ಭರವಸೆ ನಮಗೆ ಇಲ್ಲ. ಹಿಂದಿನ ಅಧಿವೇಶನದಲ್ಲಿ ಆದಷ್ಟು ಶೀಘ್ರವಾಗಿ ತಂದು ಬಿಡುತ್ತೇವೆಂದು ಹೇಳಿದ್ದೀರಿ. ಹಾಗಾಗಿ ಈ ಹದಿನೇಳು ಒಂದನ್ನು ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದ ಹಾಗೆ, ಈ ತಿದ್ದುಪಡಿಗಳಾಗುವ ಭಾಗ ಒಂದು ಕಡೆ ಆದರೆ ಮತ್ತೊಂದು ಕಡೆ ಈ ಪವರ್ ಡೆಲಿಗೇಟ್ ಮಾಡಿ ಅಧಿಕಾರಿಗಳಿಗೆ ಆ ಪವರ್ ಕೊಟ್ಟರೆ ವಿಕೇಂದ್ರೀಕರಣದ ವ್ಯವಸ್ಥೆಗೆ ಒಂದು ಪ್ರಾಮುಖ್ಯತೆ ಬರುತ್ತದೆ. ಇಲ್ಲದಿದ್ದರೆ ಎಲ್ಲವೂ ಕೇಂದ್ರೀಕೃತ, ಎಲ್ಲರೂ ಬೆಂಗಳೂರಿನಲ್ಲಿ ಆಗಬೇಕಾದರೆ ಇದು ಬಹಳ ಕಷ್ಟವಾಗುತ್ತದೆ, ಅಧಿಕಾರವನ್ನು ಅವರಿಗೆ ಹಸ್ತಾಂತರ ಮಾಡುವುದರ ಬಗ್ಗೆ ವಿಶೇಷವಾದಂಥ ಮುತುವರ್ಜಿಯನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ :- 30-1-2003ಕ್ಕೆ ಈಗಾಗಲೇ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ, ಅಬ್ಜೆಕ್ಷನ್ ಎಲ್ಲಾ ಆಗಿದೆ, ಹೀಗಾಗಿ ಇದನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದು, ಅಲ್ಲಿಂದ ಬಂದ ತಕ್ಷಣ ಸರ್ಕಾರಿ ಆದೇಶ ಹೊರಡಿಸುತ್ತದೆ.

ಎ.ಪಿ.ಎಂ.ಸಿ. ಯಾರ್ಡ್‌ಗಳಲ್ಲಿ ಆವರ್ತ ನಿಧಿ

214 (2129) ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎ.ಪಿ.ಎಂ.ಸಿ. ಯಾರ್ಡ್‌ಗಳನ್ನು ಆವರ್ತ ನಿಧಿ ಪ್ರಾರಂಭವಾದದ್ದು ಯಾವಾಗ?

ಆ) ಆವರ್ತ ನಿಧಿಗೆ ರಾಜ್ಯ ಸರ್ಕಾರದ ಅನುದಾನವೆಷ್ಟು?

ಇ) ಆವರ್ತ ನಿಧಿ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಎಷ್ಟು ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದೆ; ಹಾಗೂ ಖರೀದಿಸಿದ ಕೃಷಿ ಉತ್ಪನ್ನಗಳ ಮರು ಮಾರಾಟದಿಂದ ಬಂದ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಈ) ಆವರ್ತ ನಿಧಿಯ ಬಗ್ಗೆ ಆಡಿಟರ್ ಜನರಲ್‌ರವರ ವತಿಯಿಂದ ಲೆಕ್ಕ ಪರಿಶೀಲನೆ ಮಾಡಿಸಲಾಗಿದೆಯೇ?

ಉ) ಇಲ್ಲದಿದ್ದರೆ, ಆವರ್ತ ನಿಧಿಯ ಬಗ್ಗೆ ಶ್ವೇತಪತ್ರ ಹೊರಡಿಸಲಾಗುವುದೇ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಕೃಷಿ ಮಾರುಕಟ್ಟೆ ಸಚಿವರು) :

ಅ) ದಿನಾಂಕ: 24/11/1999ರಂದು ಸರ್ಕಾರ ಆವರ್ತ ನಿಧಿಯನ್ನು ಸ್ಥಾಪಿಸಿದೆ.

ಆ) ಆವರ್ತ ನಿಧಿಗೆ ರೂ. 44.52 ಕೋಟಿಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ

ಇ) ವಿವರಗಳನ್ನು ಅನುಬಂಧ-I ಮತ್ತು IIರಲ್ಲಿ ನೀಡಲಾಗಿದೆ.

ಈ) ಕೃಷಿ ಮಾರಾಟ ಇಲಾಖೆಯ ಲೆಕ್ಕಪರಿಶೋಧನಾ ವಿಭಾಗದಿಂದ ಲೆಕ್ಕ ಪರಿಶೋದನೆ ಕೈಗೊಳ್ಳಲಾಗಿದೆ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.